prepp

Practice, Learn and Achieve Your Goal with Prepp

# UGC NET Exam

## Kannada

Simplifying
**Government Exams**

SSC CHSL | IAS EXAM | RRB NTPC | NTSE | CDS
SSC CGL | CBSE UGC NET | IBPS PO | NDA
SBI PO | IBPS CLERK | AFCAT | SSC JE | CTET
CSIR UGC NET | CAPF | IBPS RRB

www.prepp.in

# PAPER-II
# KANNADA

**Signature and Name of Invigilator**

1. (Signature) ____________________________
   (Name) ____________________________
2. (Signature) ____________________________
   (Name) ____________________________

OMR Sheet No. : ..............................................
(To be filled by the Candidate)

Roll No. | | | | | | | | |
(In figures as per admission card)

Roll No.________________________________
(In words)

**D 2 1 1 2**

Time : $1\ ^{1}/_{4}$ hours]   [Maximum Marks : **100**

Number of Pages in this Booklet : **12**   Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** Ⓐ Ⓑ ● Ⓓ
   where (C) is the correct response.
5. Your responses to the items are to be indicated in the **OMR Sheet given inside the Paper I Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   **उदाहरण :** Ⓐ Ⓑ ● Ⓓ
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई अंक काटे नहीं जाएँगे ।**



Latest Sarkari Jobs, Govt Exam Results, Vacancies and updates on one click
Know More

# KANNADA
## Paper – II

**ಸೂಚನೆಗಳು :** ಈ ಪತ್ರಿಕೆಯಲ್ಲಿ ಬಹುಆಯ್ಕೆಯ ಐವತ್ತು **(50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಎರಡು **(2)** ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು**

**1.** 'ಕವಿತಾ ಗುಣಾರ್ಣವ ತಟಾಕ' ದ ಉಲ್ಲೇಖವಿರುವ ಶಾಸನ

(A) ಅಬ್ಬಲೂರು ಶಾಸನ

(B) ಗಂಗಾಧರಂ ಶಾಸನ

(C) ಬೆಳತೂರು ಶಾಸನ

(D) ತಮಟಕಲ್ಲು ಶಾಸನ

**2.** ಕನ್ನಡದ ಮೊತ್ತ ಮೊದಲ ಲಕ್ಷಣ ಗ್ರಂಥ

(A) ಕಾವ್ಯಾವಲೋಕನ

(B) ಶಬ್ದಸ್ಮೃತಿ

(C) ಕವಿರಾಜಮಾರ್ಗ

(D) ಛಂದೋಂಬುಧಿ

**3.** 'ಚಕ್ರೇಶ್ವರ ಚರಿತ'ವನ್ನು ಬರೆದ ಕವಿ

(A) ರನ್ನ

(B) ಚಕ್ರತೀರ್ಥ

(C) ಚಂದ್ರರಾಜ

(D) ಪೊನ್ನ

**4.** ನೇಮಿಚಂದ್ರನ ಆಶ್ರಯದಾತ

(A) ವೀರಬಲ್ಲಾಳ

(B) ಲಕ್ಷ್ಮೀಧರ

(C) ಗಂಗ ರಾಚಮಲ್ಲ

(D) ಜಗದೇಕಮಲ್ಲ

**5.** 'ವಾಸುಗಿಯುಂ ಬೇಸರುಗುಂ ದೇಸಿ ಬೇರೆ ಬೇರೆಯಪ್ಪುದರಿಂ' ಈ ಉಕ್ತಿಯು ಬಂದಿರುವ ಕೃತಿ

(A) ಕಬ್ಬಿಗರ ಕಾವ

(B) ಕಾವ್ಯಾವಲೋಕನ

(C) ಕವಿರಾಜಮಾರ್ಗ

(D) ಛಂದೋಂಬುಧಿ

**6.** ನಾಗಚಂದ್ರನ 'ರಾಮಚಂದ್ರಚರಿತಪುರಾಣ' ಕ್ಕೆ ಪ್ರೇರಣೆ

(A) ವಿಮಲಸೂರಿ

(B) ಗುಣಭದ್ರ

(C) ಭ್ರಾಜಪ್ಪ

(D) ನೇಮಿನಾಥ

**7.** ದೇಪರಾಜ ಕವಿಯ ಕಾಲ

(A) ಕ್ರಿ.ಶ. 1500

(B) ಕ್ರಿ.ಶ. 1300

(C) ಕ್ರಿ.ಶ. 1550

(D) ಕ್ರಿ.ಶ. 1400

**8.** 'ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ' ಎಂದು ಹೇಳಿದವನು ?

(A) ಸಿದ್ಧರಾಮ

(B) ದೇವರದಾಸಿಮಯ್ಯ

(C) ಅಂಬಿಗರ ಚೌಡಯ್ಯ

(D) ಬಸವಣ್ಣ



Latest Sarkari Jobs, Govt Exam Results, Vacancies and updates on one click
Know More

9. ‘ಕುಲಕುಲವೆಂದು ಹೊಡೆದಾಡದಿರಿ’ ಎಂದು ಹೇಳಿದವರು
(A) ಬಸವಣ್ಣ
(B) ಪುರಂದರದಾಸ
(C) ಕನಕದಾಸ
(D) ವಿಜಯದಾಸ

10. ‘ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯ’ ಈ ವಾಕ್ಯವನ್ನು ಹೇಳಿದ ಕವಿ
(A) ಸಂಚಿಯ ಹೊನ್ನಮ್ಮ
(B) ಸಿದ್ಧರಾಮ
(C) ಅಲ್ಲಮಪ್ರಭು
(D) ಅಕ್ಕಮಹಾದೇವಿ

11. ‘ಪ್ರಭುಲಿಂಗ ಲೀಲೆ’ ಕೃತಿಯ ಛಂದಸ್ಸು
(A) ಭಾಮಿನಿ ಷಟ್ಪದಿ
(B) ವಾರ್ಧಕ ಷಟ್ಪದಿ
(C) ಪರಿವರ್ಧಿನಿ
(D) ಕುಸುಮ ಷಟ್ಪದಿ

12. ಮಹಿಪತಿದಾಸರ ಸ್ಥಳ
(A) ಹಂಪಿ
(B) ಕಾಖಂಡಕಿ
(C) ರಾಯಚೂರು
(D) ಚೀಕಲಪರವಿ

13. ‘ತೌಲನಿಕ ದ್ರಾವಿಡ ಭಾಷಾ ಪಿತಾಮಹ’ ನೆಂದು ಹೆಸರು ಮಾಡಿದವನು
(A) ಟಿ.ಪಿ. ಮೀನಾಕ್ಷಿಸುಂದರಂ
(B) ಗುಂಡರ್ಟ್
(C) ಎಫ್. ಕಿಟೆಲ್
(D) ರಾಬರ್ಟ್ ಕಾಲ್ಡ್ ವೆಲ್

14. ಷೇಕ್ಸ್‌ಪಿಯರ್ ನ ‘ಒಥೆಲೊ’ ನಾಟಕವನ್ನು ಕನ್ನಡಕ್ಕೆ ರೂಪಾಂತರಿಸಿದವರು
(A) ಬಸವಪ್ಪ ಶಾಸ್ತ್ರಿ
(B) ಡಿ.ವಿ.ಜಿ
(C) ಎಂ.ಎಸ್. ಪುಟ್ಟಣ್ಣ
(D) ಮಾಸ್ತಿ

15. ‘ವೇಸ್ಟ್‌ಲ್ಯಾಂಡ್’ ಕಾವ್ಯದ ರಚಕ
(A) ಎಫ್.ಆರ್. ಲೂವಿಸ್
(B) ಟಿ.ಎಸ್. ಎಲ್ಯಟ್
(C) ಐ.ಎ. ರಿಚರ್ಡ್ಸ್
(D) ವಿಲಿಯಂ ಬ್ಲೇಕ್

16. ಕುಂತಕ ರಚಿಸಿದ ಕೃತಿ
(A) ಅಭಿನವದರ್ಪಣ
(B) ಅಲಂಕಾರ ಶಾಸ್ತ್ರ
(C) ವಕ್ರೋಕ್ತಿ ಜೀವಿತ
(D) ಧ್ವನ್ಯಾಲೋಕ

17. ‘ಚಕೋರಿ’ ಕಾವ್ಯದ ರಚಕ
(A) ಚಂದ್ರಶೇಖರ ಪಾಟೀಲ
(B) ಗಂಗಾಧರ ಚಿತ್ತಾಲ
(C) ಚಂದ್ರಶೇಖರ ಕಂಬಾರ
(D) ಎ.ಕೆ. ರಾಮಾನುಜಂ

18. ‘ಕ್’ ಧ್ವನಿ ದ್ರಾವಿಡ ಭಾಷೆಗಳಲ್ಲಿ ‘ಚ್’ ಧ್ವನಿಯಾಗಿ ಬದಲಾಗುವ ಪ್ರಕ್ರಿಯೆ
(A) ಅನುನಾಸಿಕೀಕರಣ
(B) ಕಂಠೀಕರಣ
(C) ತಾಲವ್ಯೀಕರಣ
(D) ಜಿಷ್ಯೀಕರಣ



Latest Sarkari Jobs, Govt Exam Results, Vacancies and updates on one click
Know More

19. 'ಬಯೋಗ್ರಾಫಿಯಾ ಲಿಟರರಿಯಾ' ವಿಮರ್ಶನ ಕೃತಿಯ ರಚಕ

(A) ಮ್ಯಾಥ್ಯೂ ಅರ್ನಾಲ್ಡ್
(B) ಕೋಲ್ ರಿಜ್
(C) ಲೀವಿಸ್
(D) ವರ್ಡ್ಸ್ ವರ್ತ್

20. ಕನ್ನಡ ಪತ್ರಿಕೋದ್ಯಮದ ಪಿತಾಮಹ

(A) ಮ್ಯೋಗ್ಲಿಂಗ್
(B) ವುರ್ಥ್
(C) ಕಿಟೆಲ್
(D) ವೈಗ್ಲೆ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು**

21. ಇವರು ಷಟ್ಪದಿ ಕೃತಿಕಾರರು

I. ಕನಕದಾಸ ಮತ್ತು ಕುಮಾರವ್ಯಾಸ
II. ಹೆಳವನಕಟ್ಟೆ ಗಿರಿಯಮ್ಮ ಮತ್ತು ಭೀಮಕವಿ
III. ದೇವಚಂದ್ರ ಮತ್ತು ಮುದ್ದಣ
IV. ಚಾಮರಸ ಮತ್ತು ರಾಘವಾಂಕ

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು III
(B) II ಮತ್ತು III
(C) II ಮತ್ತು IV
(D) I ಮತ್ತು IV

22. ಇವು ಅರ್ಥ ಸಂಕೋಚಕ್ಕೆ ಉದಾಹರಣೆಗಳು :

I. ಸಂಜೆ ಮತ್ತು ಚಿನ್ನ
II. ಅಣಕ ಮತ್ತು ಒಡವೆ
III. ಸಂಜೆ ಮತ್ತು ಎಣ್ಣೆ
IV. ಒಡವೆ ಮತ್ತು ಅಮ್ಮ

ಇವುಗಳಲ್ಲಿ ಸರಿಯಾದ ಉತ್ತರ

(A) II ಮತ್ತು III (B) I ಮತ್ತು II
(C) I ಮತ್ತು IV (D) I ಮತ್ತು III

23. ಕೆ.ಎಸ್. ನರಸಿಂಹಸ್ವಾಮಿಯವರ ಕೃತಿಗಳು

I. ಇರುವಂತಿಗೆ ಮತ್ತು ದಮಯಂತಿ
II. ತೆರೆದ ಬಾಗಿಲು ಮತ್ತು ಗರತಿಯ ಹಾಡು
III. ತೆರೆದ ಬಾಗಿಲು ಮತ್ತು ಮಾರಿಯಕಲ್ಲು
IV. ಶಿಲಾಲತೆ ಮತ್ತು ಉಯ್ಯಾಲೆ

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು II
(B) II ಮತ್ತು IV
(C) I ಮತ್ತು III
(D) II ಮತ್ತು III

24. ಇವು ಅಲಂಕಾರ ಗ್ರಂಥಗಳು

I. ಕಾವ್ಯಾದರ್ಶ ಮತ್ತು ಕಾವ್ಯಾಲಂಕಾರ
II. ಕಾವ್ಯಾದರ್ಶ ಮತ್ತು ಗುಣಗಾಂಕಿಯಂ
III. ಕಾವ್ಯಪ್ರಕಾರ ಮತ್ತು ರಸಗಂಗಾಧರ
IV. ಕಾವ್ಯಾಲಂಕಾರ ಮತ್ತು ಮಾನಸೋಲ್ಲಾಸ

ಇವುಗಳಲ್ಲಿ ಸರಿಯಾದ ಉತ್ತರ

(A) II ಮತ್ತು IV
(B) I ಮತ್ತು III
(C) III ಮತ್ತು II
(D) I ಮತ್ತು IV

25. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

| | |
|---|---|
| I. ಎಡ್ವರ್ಡ್ ಸಯೀದ್ | ಒರಿಯಂಟಾಲಿಸಂ |
| II. ಸಿಮನ್ ದಿ ಬೊವಾ | ಗೋಲ್ಡನ್ ಬೋ |
| III. ಜಾರ್ಜ್ ಲುಕಾಸ್ | ಹಿಸ್ಟಾರಿಕಲ್ ನಾವೆಲ್ |
| IV. ಐ.ಎ. ರಿಚರ್ಡ್ಸ್ | ಥಿಯರಿ ಆಫ್ ನಾವೆಲ್ |

ಸರಿಯಾದ ಉತ್ತರ

(A) I ಮತ್ತು III
(B) I ಮತ್ತು II
(C) II ಮತ್ತು IV
(D) I ಮತ್ತು IV



Latest Sarkari Jobs, Govt Exam Results, Vacancies and updates on one click
Know More

26. ಇವು ಶಬ್ದಾಲಂಕಾರಕ್ಕೆ ಉದಾಹರಣೆಗಳು :

I. ಅನುಪ್ರಾಸ

II. ಯಮಕ

III. ದೀಪಕ

IV. ಉತ್ಪ್ರೇಕ್ಷೆ

ಸರಿಯಾದ ಉತ್ತರ

(A) I ಮತ್ತು III

(B) II ಮತ್ತು III

(C) I ಮತ್ತು II

(D) I ಮತ್ತು IV

27. ಇವು ಪಂಚಮೀ ವಿಭಕ್ತಿ ಪ್ರತ್ಯಯಗಳು

I. ಅವನಿಂದೆ ಮತ್ತು ಅದರೊಳ್

II. ಅತ್ತಣಿಂ ಮತ್ತು ದೆಸೆಯಿಂದ

III. ಇನ್ ಮತ್ತು ಅತ್ತಣಿಂ

IV. ಅತ್ತಣಿಂ ಮತ್ತು ಅತ್ತಣಿಂದೆ

ಸರಿಯಾದ ಉತ್ತರ

(A) II ಮತ್ತು IV

(B) I ಮತ್ತು II

(C) II ಮತ್ತು III

(D) III ಮತ್ತು I

28. ಇವು ಅನ್ಯದೇಶೀಯ ಪದಗಳು

I. ಗಿಲೀಟು

II. ಅರಿಲ್

III. ಶಿಲ್ಕು

IV. ಮೀನ್

ಇವುಗಳಲ್ಲಿ ಸರಿಯಾದ ಉತ್ತರ

(A) II ಮತ್ತು III

(B) I ಮತ್ತು III

(C) IV ಮತ್ತು I

(D) I ಮತ್ತು IV

29. ಇವು ಮಿರ್ಜ ಅಣ್ಣಾರಾವ್ ಅವರ ಕಾದಂಬರಿಗಳು :

I. ನಿಸರ್ಗ ಮತ್ತು ಅಶೋಕ ಚಕ್ರ

II. ನಿಸರ್ಗ ಮತ್ತು ರಕ್ತತರ್ಪಣ

III. ಚಾವುಂಡರಾಯ ಮತ್ತು ಅನ್ನಾವತಾರ

IV. ಚಾವುಂಡರಾಯ ಮತ್ತು ಎರಡುಹೆಜ್ಜೆ

ಸರಿಯಾದ ಉತ್ತರ

(A) II ಮತ್ತು III

(B) II ಮತ್ತು IV

(C) I ಮತ್ತು III

(D) I ಮತ್ತು IV

30. ಇವು ತ.ರಾ.ಸು ಅವರ ಕಾದಂಬರಿಗಳು

I. ಬಿಡುಗಡೆಯ ಬೇಡಿ ಮತ್ತು ಸಂಧ್ಯಾರಾಗ

II. ಮಸಣದ ಹೂ ಮತ್ತು ಉದಯರಾಗ

III. ಮನೆಗೆ ಬಂದ ಮಹಾಲಕ್ಷ್ಮಿ ಮತ್ತು ರಕ್ತತರ್ಪಣ

IV. ಬಿಡುಗಡೆಯ ಬೇಡಿ ಮತ್ತು ಮಸಣದ ಹೂ

ಸರಿಯಾದ ಉತ್ತರ

(A) II ಮತ್ತು III

(B) I ಮತ್ತು III

(C) III ಮತ್ತು IV

(D) I ಮತ್ತು IV



Latest Sarkari Jobs, Govt Exam Results, Vacancies and updates on one click Know More

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ:**

ಈ ಕೆಳಗಿನ ಲೇಖನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ. (31 ನೇ ಪ್ರಶ್ನೆಯಿಂದ 35 ನೇ ಪ್ರಶ್ನೆಯವರೆಗೆ)

ಕಾವ್ಯ, ಕಾವ್ಯದ ಅಂಗಗಳು ಮತ್ತು ಪ್ರವೃತ್ತಿಗಳ ವಿವೇಚನೆಯ ನಂತರ ಕಾವ್ಯ ಮತ್ತು ವಿಜ್ಞಾನಗಳು ಒಂದರಿಂದೊಂದು ಪ್ರಭಾವಿತವಾಗಿಯೂ ಕೆಲವೊಮ್ಮೆ ವಿರೋಧಾತ್ಮಕ ಅಭಿಪ್ರಾಯಗಳನ್ನು ಹೊಂದಿ, ಕೆಲವೊಮ್ಮೆ ಕೂಡಿ ನಡೆದು ಮಾನವನ ಜೀವನಕ್ಕೆ ಹೊಸ ಆಯಾಮವನ್ನು ರೂಪಿಸುತ್ತವೆ. ದೇವರು-ಧರ್ಮ, ಪ್ರಕೃತಿ, ಸಮಾಜಗಳನ್ನು ಮೈಗೂಡಿಸಿಕೊಂಡು ಬೆಳೆದ ಕಾವ್ಯಪ್ರಪಂಚವು ಮಣ್ಣಿನ ವಾಸನೆಯನ್ನು ಹೊತ್ತುನಿಂತಾಗ ವಿಶಿಷ್ಟ ಸ್ವರೂಪವನ್ನು ತಳೆಯುತ್ತದೆ. ಮನುಷ್ಯನ ಭಾವ-ಬುದ್ಧಿಗಳ ಸಮ್ಮಿಲನ-ಸಂಯೋಜನೆಯ ವಿಶಿಷ್ಟರೂಪವಾದ ಪ್ರತಿಭೆಯಲ್ಲಿ ಭಾವದ ಫಲವು ಕಾವ್ಯದ ಕಲ್ಪನೆಯಾದರೆ ಬುದ್ಧಿ-ಪ್ರಯೋಗಗಳ ಫಲ ವಿಜ್ಞಾನ. ಕಲ್ಪನೆಯಷ್ಟೇ ಸಂಶೋಧನೆಯೂ ಆಶ್ಚರ್ಯಕರ.

ವಿಜ್ಞಾನ ಮತ್ತು ಸಾಹಿತ್ಯಗಳೆರಡೂ ಜೊತೆಜೊತೆಯಾಗಿ ಪ್ರಗತಿಯನ್ನು ಹೊಂದುತ್ತಾ ಬಂದಿವೆ. "ವಿಜ್ಞಾನವು ಸಾಹಿತ್ಯಕ್ಕೆ ನಿಜವಾದ ಅರ್ಥದಲ್ಲಿ ವಿರೋಧಾತ್ಮಕವಾದುದಲ್ಲ." ಕಾವ್ಯದ ಮೇಲೆ ವಿಜ್ಞಾನ, ವಿಜ್ಞಾನದ ಮೇಲೆ ಕಾವ್ಯದ ಪ್ರಭಾವವು ಮೊದಲಿನಿಂದಲೂ ಆಗುತ್ತಾ ಬಂದಿದೆ. ಕವಿಗಳು ಭಾವನಾವಶರಾಗಿ ಕಲ್ಪನಾವಿಹಾರದಲ್ಲಿ ಕಾಣುವ ವಿಷಯಗಳನ್ನು ವಿಜ್ಞಾನಿಯು ಪ್ರಯೋಗಾಲಯದಲ್ಲಿ ಒರೆಗಲ್ಲಿಗೆ ಹಚ್ಚಿ ಪರಿಣಾಮ ಕಂಡು ಆನಂದಿಸುತ್ತಾನೆ. ಸುಂದರವಾದ ಗುಲಾಬಿಯ ಹೂವು ಕವಿಯ ದೃಷ್ಟಿಯಲ್ಲಿ ಸೌಂದರ್ಯ, ಪ್ರೇಮ, ಪರಿಶುದ್ಧತೆಯ ಪ್ರತೀಕ. ವಿಜ್ಞಾನಿ ಅದೇ ಹೂವನ್ನು ತೆಗೆದುಕೊಂಡು ದಳ-ದಳಗಳನ್ನು ಬಿಚ್ಚಿ ಅದಕ್ಕಿರುವ ಬಣ್ಣ-ವಾಸನೆ, ಗುಣಧರ್ಮ, ಹೇಗೆ ಉಂಟಾದವೆಂದು ಅದರಲ್ಲಡಗಿರುವ ಸತ್ವ ಯಾವುದೆಂದು ಪರೀಕ್ಷಿಸುತ್ತಾನೆ.

ಕವಿ, ವಿಜ್ಞಾನಿಗಳ ಗುರಿಯೊಂದೇ- "ಸತ್ಯಶೋಧನೆ." ದಾರಿ ಮಾತ್ರ ಬೇರೆ ಬೇರೆ. "ಕವಿಯು ಸತ್ಯದ ಮೂಲಕ ಸೌಂದರ್ಯವನ್ನು, ಸೌಂದರ್ಯದ ಮೂಲಕ ಸತ್ಯವನ್ನು ಮಾತ್ರ ಈ ಮರ್ತ್ಯದಲ್ಲಿ ತಿಳಿಯಲು ಪ್ರಯತ್ನಿಸುತ್ತಾನೆ" ವಿಜ್ಞಾನಿ ತನ್ನ ಮನಸ್ಸನ್ನು ಸೆರೆಹಿಡಿದ ವಸ್ತುವನ್ನು ವಿವಿಧ ಪ್ರಯೋಗಗಳಿಗೆ ಅಳವಡಿಸಿ ಸತ್ಯವನ್ನು ಪ್ರಮಾಣಗಳ ಸಮೇತ ತೋರ್ಪಡಿಸುತ್ತಾನೆ.

ವಿಜ್ಞಾನದ ಅವಿಷ್ಕಾರಗಳು ಮಾನವನಿಗೆ ಹೊಸ ವಿಷಯಗಳೇನೂ ಅಲ್ಲ. ಮಾನವನು ಕಲ್ಪನೆಯಲ್ಲಿ ಕಾಣದ ವಿಷಯಗಳೂ ಇಲ್ಲ. ರೈಟ್ಸ್ ಸೋದರರು ವಿಮಾನವನ್ನು ಕಂಡು ಹಿಡಿಯುವ ಮೊದಲೇ ಕವಿಕಲ್ಪನೆಯಲ್ಲಿ ಮಾನವನು ಹಾರುವುದು ಹೊಸತಾಗಿರಲಿಲ್ಲ. ಕ್ರಿಸ್ತಶಕ ಪೂರ್ವದಿಂದಲೂ ಪುಷ್ಪಕ ವಿಮಾನದ ಉಲ್ಲೇಖವಿದೆ. ಮನುಷ್ಯರಿಗೆ ಮನೋವೇಗದಲ್ಲಿ ಹೋಗಬೇಕೆಂಬ ಬಯಕೆ ಬಹಳ ಸಲ ಅವಶ್ಯಕವೆನಿಸುತ್ತದೆ. 'ಮೇಘದೂತ' ನಾಗಲು ತಾನೇ 'ರೆಕ್ಕೆಗಳನ್ನು ಹೊಂದಿರಬಾರದೇ' ಯೆಂದು ಮರುಗುವಲ್ಲಿ ಅದೇ ಮನೋಗತ ವ್ಯಕ್ತವಾಗುತ್ತದೆ. 'ಕಾಯ್ದಭೂಮಿಯಂತೆ' ಯೆಂಬ ಉಪಮೇಯವನ್ನು ಕಾಳಿದಾಸನು ಬಳಸಿಕೊಳ್ಳುವಾಗ ಕಾಯ್ದಭೂಮಿಯು ಹೆಚ್ಚು ಫಲವತ್ತಾಗಿರುವದೆಂಬ ವಿಷಯವು ವೈಜ್ಞಾನಿಕ ಸತ್ಯ. ಕವಿಗಳ ಕಲ್ಪನೆಯು ವಿಜ್ಞಾನದ ಸತ್ಯವನ್ನು ಪ್ರತಿಫಲಿಸುತ್ತದೆ. "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ" ಯೆಂದು ಅಕ್ಕಮಹಾದೇವಿ ಹೇಳಿರುವುದು ಕಾಯುವ ಭೂಮಿಯ ಫಲವತ್ತತೆಯನ್ನು ಎತ್ತಿ ಹಿಡಿಯುತ್ತದೆ. ಎಚ್. ಜಿ.ವೆಲ್ಸ್ ನಂತಹ ಲೇಖಕರು ಮಾನವನು ಚಂದ್ರಲೋಕದಲ್ಲಿಳಿಯುವದನ್ನು ವಿಜ್ಞಾನಿಗಳಿಗಿಂತ ಮುಂಚಿತವಾಗಿಯೆ ಬರೆದಿದ್ದರು.



Latest Sarkari Jobs, Govt Exam Results, Vacancies and updates on one click
Know More

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಜ್ಞಾನವು ಆರಂಭದ ಹಂತದಲ್ಲಿ ಸಾಮಾಜಿಕರಿಗೆ ಆಘಾತಕಾರಕವಾಗಿತ್ತು. ವಿಜ್ಞಾನಿಗಳು ತಮ್ಮ ಜೀವನವನ್ನು ಮುಡುಪಾಗಿಟ್ಟು ಕಷ್ಟಪಟ್ಟು ಸಂಶೋಧಿಸಿದ ವಿಷಯಗಳು ಜನತೆಗೆ ಅದ್ಭುತವೆನಿಸುವದರ ಜೊತೆಗೆ ಅಸತ್ಯವಾಗಿ ಕಂಡವು. ಆದ್ದರಿಂದ ಧರ್ಮ-ದೈವದ್ರೊಹಿಗಳೆಂದು ಪರಿಗಣಿಸಲ್ಪಟ್ಟು ನಾನಾ ಕಷ್ಟಗಳಿಗೆ ಗುರಿಯಾದರು. ಇದ್ದುದನ್ನು ಇದ್ದಂತೆ ಹೇಳಿದ ವಿಜ್ಞಾನಿಗಳು ಧರ್ಮಾಂಧ ಜನತೆಯ ಅವಕೃಪೆಗೆ ಪಾತ್ರರಾಗಿದ್ದರೆ ಕವಿಗಳು ಮಾನವನ ಗುಣಧರ್ಮ-ಗಳನ್ನನುಸರಿಸಿ ಅಪ್ರಿಯವಾಗದಂತೆ, ಮನಂಬುಗುವಂತೆ ಹೇಳುವ ವಿಶಿಷ್ಠಕಲೆಯನ್ನು ಸಾಧಿಸಿದ್ದಾರೆ. ಪ್ಲೇಟೋನಂತಹ ಕೆಲವರನ್ನು ಬಿಟ್ಟರೆ ಸಾಹಿತ್ಯ ಸೃಷ್ಟಿಯನ್ನು ಪ್ರಶ್ನಿಸಿದವರಿಲ್ಲ. ಮನುಷ್ಯನ ಭಾವನೆಯ ಬಳ್ಳಿ ಕಾವ್ಯ ಕುಸುಮಗಳನ್ನು ಬಿಟ್ಟರೆ ಬುದ್ಧಿಯ ಬಳ್ಳಿ ವಿಜ್ಞಾನದ ಫಲವನ್ನು ಕೊಡುತ್ತದೆ. ಮಾನವ ಜೀವನಕ್ಕೆ ಎರಡೂ ಅಗತ್ಯ. ಒಂದನ್ನುಳಿದು ಇನ್ನೊಂದು ಸಾಗಲಾರದು.

ವಿಶಾಲವಾದ ಜಗತ್ತಿನಲ್ಲಿ ಮಾನವನ ಅಸ್ತಿತ್ವವೆಂದರೆ ಗುರುತಿಸಲಾರದ ಒಂದು ಅಣು. ಆದರೆ ವಿಜ್ಞಾನಕ್ಕೆ ವಿದಿತವಾದ ಜಗತ್ತಿಗಿಂತಲೂ, ಮಾನವನು ತನ್ನದೇ ಆದ ಮತ್ತೊಂದು ಜಗತ್ತಿನ ಕೇಂದ್ರವ್ಯಕ್ತಿಯಾಗಿ ಉಳಿದಿದ್ದಾನೆ. ಧೀಶಕ್ತಿಯಿಂದ ಜಗತ್ತಿಗೆ ತನ್ನದೇ ಆದ ಉದಾತ್ತ ಮತ್ತು ವಿಶೇಷವಾದ ಭಾವಾವೇಗಗಳನ್ನೀಯುವ ಭಾವಜೀವಿ ಮಾನವನೆಂಬುದು ಕವಿಯ ತಿಳುವಳಿಕೆ. ಭೌತಿಕ ಗುಣಗಳ ಬಗ್ಗೆ ಖಚಿತಜ್ಞಾನ ಹೊಂದಿ, ಅವುಗಳನ್ನು ಜಯಿಸಿ, ಜಗತ್ತಿನ ಭೌತಿಕಗುಣ ರೂಪಗಳನ್ನರಿತು ಮಾನವನು ಮಾನಸಿಕ ಭಾವನೆಗಳಿಗೆ ಒಳಪಡಿಸಿಕೊಳ್ಳುತ್ತಾನೆ. ಪ್ರಚಲಿತವಿರುವ ಭಾವನೆ ಅಥವಾ ತತ್ವಗಳಿಗೆ ಕವಿ ಹೊಸ ರೂಪವನ್ನು ಕೊಟ್ಟರೆ ವಿಜ್ಞಾನವು ಅದನ್ನು ಪ್ರಶ್ನಿಸಿದರೂ ಕಾವ್ಯಕಲೆಯು ತಿರಸ್ಕರಿಸುವುದಿಲ್ಲ. ಆದರೂ ಸಾಮಾಜಿಕ ಪರಿಸ್ಥಿತಿಯ ಮೇಲಿನ ವಿಜ್ಞಾನದ ಸಂಶೋಧನೆಗಳು ಕಾವ್ಯಕಲೆಯ ಮೇಲೆ ಪ್ರಭಾವ ಬೀರದೇಯಿಲ್ಲ.

ಭೂಮಿಯ ಮೇಲೆ ಬದುಕುವ ಜೀವರಾಶಿಗಳಿಗೆಲ್ಲ ಸೂರ್ಯ ಶಕ್ತಿ ಮೂಲ. ಕೋಪರ್ನಿಕಸ್, ಟಾಲೆಮಿ, ಟೈಕೊಬ್ರಾಹೆ, ಕೆಪ್ಲರ್ ಮತ್ತು ಗೆಲಿಲಿಯೋ ಮೊದಲಾದ ಖಗೋಳ ಶಾಸ್ತ್ರಜ್ಞರು ಪರಿಶ್ರಮಿಸಿ ವಿಶ್ವದ ವಿರಾಟ-ರೂಪವನ್ನು ನಿರೂಪಿಸಿದರು.

"ವೈಜ್ಞಾನಿಕ ಕ್ಷೇತ್ರಕ್ಕೆ ಪಾಂಡಿತ್ಯಪೂರ್ಣ ಪರಿಸರವನ್ನೊದಗಿಸಿದ" ಬೇಕನ್‌ನು ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವ ಪಡೆದು ಜನತೆಯ ಕಲ್ಪನೆಗೆ ನಿಲುಕುವಂತೆ ವಿವರಿಸಬಲ್ಲವನಾಗಿದ್ದನು. ಅವನ ಅಭಿಪ್ರಾಯದಂತೆ "ಮಾನವನೆದುರು ಭೇದಿಸಲಾಗದ ಅಪಾರ ಜ್ಞಾನ ಭಂಡಾರವಿದೆ. ಅದರ ಬಗ್ಗೆ ಅವನು ನಿರಹಂಕಾರಿಯಾಗಿ ತಾಳ್ಮೆಯಿಂದ, ಶ್ರದ್ಧೆಯಿಂದ ಪ್ರಯತ್ನಿಸಿದರೆ ಅದನ್ನು ಅರಿಯಬಲ್ಲನು."

ಹದಿನೇಳನೆಯ ಶತಮಾನದ ವಿಜ್ಞಾನ-ಪ್ರಪಂಚವು ಕೋಪರ್ನಿಕಸನಿಂದ ಚೇತನಾಯುಕ್ತಗೊಂಡಿದ್ದರೂ ಬರಹಗಾರರು ವಿಜ್ಞಾನಿಗಳ ಸಾಧನೆಗಳನ್ನು ಸಂಪೂರ್ಣವಾಗಿ ಒಪ್ಪಿರಲಿಲ್ಲ. ಆದರೂ ಕವಿಗಳು ವಿಜ್ಞಾನದ ಸಾಧನೆಗಳಿಂದ ಪ್ರಭಾವಿತರಾಗಿ ಸಾಹಿತ್ಯದಲ್ಲಿ ಹಲವಾರು ಉಪಮೆ, ರೂಪಕಗಳನ್ನು ಪಡೆದುಕೊಳ್ಳತೊಡಗಿದರು. ಕ್ರಿ.ಶ. ೧೬೬೨ ರಲ್ಲಿ ವಿಜ್ಞಾನಿಗಳ ಸಣ್ಣ ತಂಡವೊಂದರಿಂದ "ರಾಯಲ್ ಸೊಸೈಟಿ" ಯು ಪ್ರಾರಂಭಿಸಲ್ಪಟ್ಟಿತು. ಈ ಸಂಸ್ಥೆಗೆ ಡೆನ್‌ಹ್ಯಾಂ, ಎವಿಲಿನ್, ವಾಲ್ಟರ್ ಕಾಲೆ ಮತ್ತು ಡ್ರಾಯಡನ್ ಮೊದಲಾದ ಸಾಹಿತಿಗಳು ಸದಸ್ಯರಾಗಿದ್ದರು.

ವೈಜ್ಞಾನಿಕ ಚಳುವಳಿಯು ತೀವ್ರಸ್ವರೂಪವನ್ನು ತಳೆದಿದ್ದ ಕಾಲದಲ್ಲಿ ಡಾನ್ನೆ ಮತ್ತು ಮಿಲ್ಟನ್ನರು ವಿಜ್ಞಾನದ ಆವಿಷ್ಕಾರಗಳಿಂದ ಪ್ರಭಾವಿತರಾಗಿದ್ದರೆಂಬ ವಿಷಯವು ಅವರ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಧಾರ್ಮಿಕ ಮನೋಭಾವ ವಿಜ್ಞಾನದ ಪ್ರಭಾವಗಳ ನಡುವಿನ ಸಂಘರ್ಷವನ್ನು ಧರ್ಮಗುರುವಾಗಿದ್ದ ಡಾನ್ನೆನ ವಿಚಾರಗಳು ವ್ಯಕ್ತಪಡಿಸುತ್ತವೆ. ಕೊನೆಗೆ ಆತನು ಧಾರ್ಮಿಕ ಶ್ರದ್ಧೆ, ಪರಂಪರೆಗಳನ್ನು ಮೀರಿದ ಅಂತಃಸತ್ವವೊಂದು ವಿಜ್ಞಾನ-



Latest Sarkari Jobs, Govt Exam Results, Vacancies and updates on one click
Know More

ದಲ್ಲಿದೆಯೆಂದು ಒಪ್ಪಿಕೊಂಡು "ನನ್ನ ಪ್ರಜ್ಞೆಯಂತೆ ಅರಿಯಲಿಕ್ಕೂ, ಉಚ್ಚರಿಸಲಿಕ್ಕೂ, ವಿಶ್ಲೇಷಿಸಲಿಕ್ಕೂ ನನಗೆ ಸ್ವಾತಂತ್ರ್ಯವನ್ನು ಕರುಣಿಸು; ಅದೇ ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು" ಯೆಂದಿದ್ದಾನೆ.

ವಿಜ್ಞಾನಿಗಳ ದೃಷ್ಟಿಕೋನವನ್ನು ಸಂಪೂರ್ಣವಾಗಿ ಒಪ್ಪದ ಸಾಹಿತಿಗಳು ಬರಬರುತ್ತಾ ಅವರ ಸಂಪರ್ಕದಿಂದ ತಮ್ಮ ವಿಚಾರಧಾರೆಯ ಮೂಲವನ್ನು ಬದಲಿಸುತ್ತಾ ನಡೆದರು. ಆಕಾಶದಲ್ಲಿ ಹಾರುತ್ತಿದ್ದ ಸಾಹಿತಿಗಳ ಜೀವನಮೌಲ್ಯಗಳು ವಿಜ್ಞಾನಿಗಳ ಸಂಪರ್ಕದಿಂದ ಭೂಮಿಗಿಳಿದವು. ವಿಜ್ಞಾನಪ್ರಪಂಚದ ಪ್ರಯೋಗಗಳು, ಅವಿಷ್ಕಾರಗಳು ಜೀವನದ ಎಲ್ಲಾ ಮುಖಗಳನ್ನು ಶೋಧಿಸಿ, ಅಂಧಶ್ರದ್ಧೆ, ಮೂಢ ನಂಬಿಕೆಗಳನ್ನು ದೂರಸರಿಸಿ ಯಥಾರ್ಥದ ಅರಿವನ್ನು ಹುಟ್ಟಿಸಿದವು. ಈ ವಿಧದಲ್ಲಿ ರಾಯಲ್ ಸೊಸೈಟಿಯ ಸಾಧನೆಯು ಗಮನಾರ್ಹ. ಜಗತ್ತಿನ ಬಗೆಗೆ ತರ್ಕಶುದ್ಧವಾದ ದೃಷ್ಟಿಕೋನವನ್ನು ಸ್ಪಷ್ಟಪಡಿಸಿ, ಸಾಹಿತ್ಯ ಮತ್ತು ಸಮಾಜವನ್ನು ತನ್ನ ಪ್ರಭಾವಕ್ಕೊಳ-ಪಡಿಸಿಕೊಂಡಿತು. ಫಲಸ್ವರೂಪವಾಗಿ ಸಾಹಿತ್ಯದ ವಸ್ತು, ವಿಷಯಶೈಲಿಗಳಲ್ಲಿ ಗಣನೀಯ ಬದಲಾವಣೆಯು ಕಂಡುಬಂದಿತು. ಎಲ್ಲ ವಿಷಯಗಳೂ ಸಹಜ, ಸರಳ ಮತ್ತು ಆತ್ಮೀಯ ಮಾತುಗಳಲ್ಲಿ ನೇರವಾದ ವಿಶುದ್ಧ ಬುದ್ಧಿಯ, ತರ್ಕಬದ್ಧ ಅಭಿವ್ಯಕ್ತಿಯನ್ನು ಪಡೆಯತೊಡಗಿದವು. ಸಮಕಾಲೀನರು ವಿಜ್ಞಾನದ ಅವಶ್ಯಕತೆ ಮತ್ತು ಪ್ರಭಾವಗಳ-ನ್ನೊಪ್ಪಿಕೊಂಡದ್ದರಿಂದ ಸಾಹಿತ್ಯದಲ್ಲಿ ಹೊಸಶೈಲಿಯ ಪ್ರಗತಿಯಾಯಿತು. ಆಗ ಮೊದಲಿದ್ದ ಛಂದೋಬದ್ಧತೆ, ಸೌಂದರ್ಯ, ವೈವಿಧ್ಯತೆ, ವ್ಯಂಗ್ಯಾತ್ಮಕ ಗೂಢಾರ್ಥಗಳು ದೂರವಾದವು. ಆಗ ಆತ್ಮಕಥೆ, ಕಾದಂಬರಿಗಳ ಅಭಿವ್ಯಕ್ತಿಗೆ ಗದ್ಯವು ಸಮರ್ಥ ಸಾಧನೆಯಾಯಿತು, ಅದರಂತೆ ವಿಜ್ಞಾನವು ತನಗೆ ಕಷ್ಟಸಾಧ್ಯವಾದ ಸ್ಪಷ್ಟ, ತರ್ಕಶುದ್ಧ ಮತ್ತು ಅತ್ಯಾವಶ್ಯಕ ಪ್ರತಿಮೆಗಳನ್ನು ಪಡೆಯುವ ಕಲೆಯನ್ನು ಕರಗತ ಮಾಡಿಕೊಂಡಿತು. ಈ ವಿಧವಾದ ಹದಿನೇಳನೆಯ ಶತಮಾನದ ವಿಜ್ಞಾನವು ಸಾಹಿತ್ಯ ಕ್ಷೇತ್ರಕ್ಕೆ ಅಭಿವ್ಯಕ್ತಿಯ ಹೊಸಮೌಲಿಕತೆಯನ್ನು ಕೊಟ್ಟರೆ, ಸಾಹಿತ್ಯದಿಂದ ಅದು ತನ್ನ ಗೌರವವನ್ನು, ಪ್ರಗತಿಯನ್ನು ಉನ್ನತಗೊಳಿಸಿಕೊಳ್ಳುವ ಅತ್ಯಾವಶ್ಯಕ ಸಾಧನವನ್ನು ಪಡೆಯಿತು.

**31.** ಈ ಲೇಖನದಲ್ಲಿ ವ್ಯಕ್ತವಾಗಿರುವ ಪ್ರಮುಖ ವಿಷಯ:

(A) ಕಾವ್ಯ ಮತ್ತು ವಿಜ್ಞಾನದ ಪರಸ್ಪರ ಪ್ರಭಾವ ಮತ್ತು ಬೆಳವಣಿಗೆ

(B) ವಿಜ್ಞಾನದ ಪ್ರಗತಿಶೀಲಧೋರಣೆ, ಕಾವ್ಯದ ಕಾಲ್ಪನಿಕ ನೆಲೆ

(C) ವಿಜ್ಞಾನದ ಸತ್ಯಶೋಧನೆ, ಸಾಹಿತ್ಯದ ಸೌಂದರ್ಯೋಪಾಸನೆ

(D) ಭಾವನೆಗಳ ಭಾಗವಾದ ಕಾವ್ಯ, ಬುದ್ಧಿಯ ಭಾಗವಾದ ವಿಜ್ಞಾನ, ಎರಡರ ವಿಭಿನ್ನ ನೆಲೆ

**32.** ಲೇಖನದಲ್ಲಿ ಹೇಳಲಾದ ವಿಜ್ಞಾನದ ಪ್ರಧಾನ ದೃಷ್ಟಿ

(A) ಸತ್ಯವನ್ನೇ ಶೋಧಿಸುವುದು

(B) ಲೋಕದ ಗುಣಧರ್ಮವು ಹೇಗೆ ಬಂದಿತೆಂದು ಪರೀಕ್ಷಿಸುವುದು

(C) ಬುದ್ಧಿಬಲವನ್ನು ಮುಖ್ಯವೆಂದು ತಿಳಿಯುವುದು

(D) ಧರ್ಮದ ವಿರುದ್ಧ ತನ್ನ ನಿಲುವನ್ನು ತಳೆಯುವುದು

**33.** ಕಾವ್ಯಕಲೆಯ ಮೇಲೆ ಆಧುನಿಕ ವೈಜ್ಞಾನಿಕ ದೃಷ್ಟಿಕೋನದ ಪ್ರಭಾವ

(A) ಹೆಚ್ಚೇನೂ ಆಗಿಲ್ಲ

(B) ವಿರೋಧದಿಂದ ಕೂಡಿದೆ

(C) ಅನೇಕ ಬದಲಾವಣೆಯ ದೃಷ್ಟಿಕೋನಕ್ಕೆ ಕಾರಣವಾಗಿದೆ

(D) ನಗಣ್ಯವೆನ್ನುವಷ್ಟು ಅಲ್ಪ ಪ್ರಮಾಣದ್ದು



Latest Sarkari Jobs, Govt Exam Results, Vacancies and updates on one click
Know More

**34.** ಧಾರ್ಮಿಕ ಮತ್ತು ವೈಜ್ಞಾನಿಕ ಮನೋಭಾವಗಳು

I. ಪರಸ್ಪರ ಸಂಘರ್ಷವನ್ನು ಚರಿತ್ರೆಯಲ್ಲಿ ತೊಡಗಿಸಿವೆ.

II. ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಂಡಿವೆ.

III. ಹೊಂದಾಣಿಕೆಯೇ ಇಲ್ಲದಂತೆ ವೈರತ್ವ ತಳೆದಿವೆ.

IV. ಲೋಕವನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸಿವೆ.

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು II

(B) I ಮತ್ತು IV

(C) II ಮತ್ತು III

(D) II ಮತ್ತು IV

**35.** ಸಾಹಿತ್ಯ ಮತ್ತು ವಿಜ್ಞಾನಗಳು ಪರಸ್ಪರ ವಹಿಸಬಹುದಾದ ಪಾತ್ರ

I. ಲೋಕವನ್ನು ನಿರ್ನಾಮಗೊಳಿಸುವ ಶಕ್ತಿ

II. ಲೋಕವನ್ನು ಬದಲಾಯಿಸುವ ಕ್ರಿಯಾಶೀಲತೆ

III. ಸಂಘರ್ಷ ಮತ್ತು ಸಂವಾದದಿಂದ ತಮ್ಮನ್ನು ಬದಲಾಯಿಸಿಕೊಳ್ಳುವುದು

IV. ಪರಸ್ಪರ ವಿರುದ್ಧ ಭಾವವನ್ನು ತಳೆಯುವುದರ ಮೂಲಕ ತಮ್ಮದೇ ಆದ ಶಕ್ತಿಯನ್ನು ಪ್ರದರ್ಶಿಸುವುದು

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು III

(B) II ಮತ್ತು IV

(C) I ಮತ್ತು IV

(D) II ಮತ್ತು III

**ಹೇಳಿಕೆ - ವಿವರಣೆ ಆಧಾರಿತ ಬಹುಆಯ್ಕೆಯ ಮಾದರಿ**

**36.** **ಹೇಳಿಕೆ** : ‘ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೋಲ್ ಮಂಜುವೋಲ್ ತೋರಿ ಬೇಗಂ ಪರಿಗುಂ’

**ವಿವರಣೆ** : ದೇವನ ಬಿಲ್ಲಿನಂತೆ, ವಿದ್ಯುಚ್ಛಕ್ತಿಯಂತೆ, ಮಂಜುಳನಾದದಂತೆ ಕಾಣಿಸಿ ಬೇಗನೆ ಹರಿದುಹೋಗುತ್ತದೆ.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ಸರಿ

**37.** **ಹೇಳಿಕೆ** : ‘ಜನಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ, ತನುವಿನ ಮೇಲೆ ಬ್ರಹ್ಮಚರ್ಯತ್ವವಳವಟ್ಟರೇನು, ಮನದ ಮೇಲೆ ಬ್ರಹ್ಮಚರ್ಯತ್ವವಳವಡದನ್ನಕ್ಕ’ ?

**ವಿವರಣೆ** : ಜನ ಒಪ್ಪುವ ಹಾಗೆ ಶುದ್ಧಿ ಇದೆಯೇ ಹೊರತು ಮನಮೆಚ್ಚುವಂತೆ ಶುದ್ಧತೆ ಇಲ್ಲ. ಮನಸ್ಸಿನಲ್ಲಿ ಬ್ರಹ್ಮಚರ್ಯ ಇಲ್ಲದಿದ್ದರೆ ಬ್ರಹ್ಮಚರ್ಯವು ದೇಹಕ್ಕೆ ಇದ್ದರೇನು ?

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ಸರಿ



Latest Sarkari Jobs, Govt Exam Results, Vacancies and updates on one click
Know More

38. **ಹೇಳಿಕೆ** : 'ರಸಭಂಗಕ್ಕೆ ಅನೌಚಿತ್ಯವನ್ನು ಬಿಟ್ಟು ಬೇರಾವುದೂ ಕಾರಣವಿಲ್ಲ. ಪ್ರಸಿದ್ಧವಾದ ಔಚಿತ್ಯದ ಪರಿಪಾಲನೆಯೇ ರಸದ ಪರಮ ರಹಸ್ಯ'.

**ವಿವರಣೆ** : ರಸಭಂಗಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಔಚಿತ್ಯದ ಪರಿಪಾಲನೆಯನ್ನು ಮಾಡದಿರುವುದು ಒಂದು.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

39. **ಹೇಳಿಕೆ** : 'ವಾರಿನೋಟ ಹಾರತಿತ್ತೋ ಹೊಳಿಮ್ಯಾಗ ಹೊಸ ಹರೆ ಈಸತಿತ್ತೋ ಹೊಳಿಯಾಗ'

**ವಿವರಣೆ** : ಹೊಳೆಯ ಮೇಲೆ ವಕ್ರನೋಟ ಹಾರುತ್ತಿತ್ತು. ಹೊಳೆಯೊಳಗೆ ಯೌವನದ ಹೆಣ್ಣು ಈಸುತ್ತಿದ್ದಳು.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

40. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಹೊಂದಿಕೆಯಾಗುತ್ತದೆ ?

(A) ಹಲ್ಮಿಡಿ ಶಾಸನ ಜಿನವಲ್ಲಭ

(B) ಗಂಗಾಧರ ಶಾಸನ ವಿಜಾರಸ

(C) ಬಾದಾಮಿ ಶಾಸನ ನಂದಿಸೇನಪ್ರವರ ಮುನಿ

(D) ಬೆಳತೂರು ಶಾಸನ ರವಿಗ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಹೊಂದಿಕೆಯಾಗುತ್ತದೆ ?

(A) ನಾಗಚಂದ್ರ ಶಾಂತಿಪುರಾಣ

(B) ಲಕ್ಕಣದಂಡೇಶ ಹದಿಬದೆಯ ಧರ್ಮ

(C) ಷಡಕ್ಷರಿ ಶಬರಶಂಕರ ವಿಳಾಸ

(D) ಸಂಚಿಯ ಹೊನ್ನಮ್ಮ ಶಿವತತ್ತ್ವ ಚಿಂತಾಮಣಿ

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದುವುದಿಲ್ಲ ?

(A) ಸುಬ್ರಹ್ಮಣ್ಯ ಭಾರತಿ ಪಾಂಚಾಲಿಶಪಥಂ

(B) ರವೀಂದ್ರನಾಥ ಠಾಕೂರ್ ಮಾನಸಿ

(C) ತಕಳಿ ಶಿವಶಂಕರ ಪಿಳ್ಳೈ ಎರಡು ಬಳ್ಳ

(D) ಬಂಕಿಂಚಂದ್ರ ಗೀತಾಂಜಲಿ

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಹೊಂದಿಕೆಯಾಗುತ್ತದೆ ?

(A) ಕೋಲ್‌ರಿಜ್ ಬಯಾಗ್ರಫಿಯಾ ಲಿಟರರಿಯಾ

(B) ಪ್ಲೇಟೊ ಆರ್ಟ್ಸ್ ಪೊಯೆಟಿಕಾ

(C) ಮ್ಯಾಥ್ಯೂ ಆರ್ನಾಲ್ಡ್ ಈಸ್ಥೆಟಿಕ್

(D) ಕ್ರೋಚೆ ಲಿಟರೇಚರ್ ಅಂಡ್ ಡಾಗ್ಮಾ

44. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಹೊಂದಿಕೆಯಾಗುತ್ತದೆ ?

(A) ಬಿ.ಎಲ್. ರೈಸ್ ಕಂಪ್ಯಾರಿಟಿವ್ ಗ್ರಾಮರ್ ಆಫ್ ದಿ ದ್ರಾವಿಡಿಯನ್ ಲಾಂಗ್ವೇಜಸ್

(B) ರಾಬರ್ಟ್ ಕಾಲ್ಡ್ ವೆಲ್ ಕನ್ನಡ-ಇಂಗ್ಲಿಷ್ ನಿಘಂಟು

(C) ರೆ.ಎಫ್. ಕಿಟೆಲ್ ಕನ್ನಡ-ಇಂಗ್ಲಿಷ್ ನಿಘಂಟು

(D) ಇ.ಪಿ. ರೈಸ್ ಎಪಿಗ್ರಾಫಿಯಾ ಕರ್ನಾಟಿಕಾ



Latest Sarkari Jobs, Govt Exam Results, Vacancies and updates on one click
Know More

**45.** ಬಹುಆಯ್ಕೆಯ ಜೋಡಣೆ

a. ಮಧುರಚೆನ್ನ — i. ಓಂ ಣಮೋ

b. ವಿ.ಕೃ. ಗೋಕಾಕ್ — ii. ಕಾಳರಾತ್ರಿ

c. ಶಾಂತಿನಾಥ ದೇಸಾಯಿ — iii. ಇಜ್ಜೋಡು

d. ದೇವನೂರ ಮಹಾದೇವ — iv. ಮೂರುದಾರಿಗಳು

v. ಕುಸುಮಬಾಲೆ

**ಇವುಗಳಿಗೆ ಸರಿಯಾದ ಉತ್ತರ**

| | a | b | c | d |
|---|---|---|---|---|
| (A) | i | iii | iv | v |
| (B) | ii | iv | iii | i |
| (C) | i | ii | iii | v |
| (D) | ii | iii | i | v |

**46.** ಬಹುಆಯ್ಕೆಯ ಜೋಡಣೆ

a. ಎಂ.ಎಂ. ಕಲಬುರ್ಗಿ — i. ಸರಸ್ವತಿ ಸಮ್ಮಾನ್

b. ಚಂದ್ರಶೇಖರ ಕಂಬಾರ — ii. ಪಂಪ ಪ್ರಶಸ್ತಿ

c. ಚಂದ್ರಶೇಖರ ಪಾಟೀಲ — iii. ನೃಪತುಂಗ ಪ್ರಶಸ್ತಿ

d. ಎಸ್.ಎಲ್. ಭೈರಪ್ಪ — iv. ಜ್ಞಾನಪೀಠ ಪ್ರಶಸ್ತಿ

v. ಕಬೀರ್ ಸಮ್ಮಾನ್

**ಇವುಗಳಿಗೆ ಸರಿಯಾದ ಉತ್ತರ**

| | a | b | c | d |
|---|---|---|---|---|
| (A) | iii | ii | iv | i |
| (B) | iii | iv | ii | i |
| (C) | v | ii | iii | i |
| (D) | iii | i | iv | v |

**47.** ಬಹುಆಯ್ಕೆಯ ಜೋಡಣೆ

a. ಕಾವ್ಯ — i. ಮಾಡಿ ಮಡಿದವರು

b. ಕಾದಂಬರಿ — ii. ಇರುವಂತಿಗೆ

c. ನಾಟಕ — iii. ಬಿರುಕು

d. ವಿಮರ್ಶೆ — iv. ನನ್ನ ತಂಗಿಗೊಂದು ಗಂಡುಕೊಡಿ

v. ಉರಿಯ ನಾಲಿಗೆ

**ಇವುಗಳಿಗೆ ಸರಿಯಾದ ಉತ್ತರ**

| | a | b | c | d |
|---|---|---|---|---|
| (A) | ii | i | iv | v |
| (B) | i | ii | iv | v |
| (C) | ii | i | v | iv |
| (D) | i | iv | v | iii |

**48.** **ಅನುಕ್ರಮ ಮಾದರಿ** : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿರಿ.

(A) ಕವಿರಾಜಮಾರ್ಗ, ಶಬ್ದಮಣಿದರ್ಪಣ, ಕಾವ್ಯಾವಲೋಕನ, ಛಂದೋಂಬುಧಿ

(B) ಶಬ್ದಮಣಿದರ್ಪಣ, ಕವಿರಾಜಮಾರ್ಗ, ಕಾವ್ಯಾವಲೋಕನ, ಛಂದೋಂಬುಧಿ

(C) ಕವಿರಾಜಮಾರ್ಗ, ಛಂದೋಂಬುಧಿ, ಕಾವ್ಯಾವಲೋಕನ, ಶಬ್ದಮಣಿದರ್ಪಣ

(D) ಛಂದೋಂಬುಧಿ, ಶಬ್ದಮಣಿದರ್ಪಣ, ಕಾವ್ಯಾವಲೋಕನ, ಕವಿರಾಜಮಾರ್ಗ

**49.** (A) ಪಾಲ್ಕುರಿಕೆ ಸೋಮನಾಥ, ಲಕ್ಕಣ್ಣ ದಂಡೇಶ, ಭೀಮಕವಿ, ಚಾಮರಸ

(B) ಭೀಮಕವಿ, ಪಾಲ್ಕುರಿಕೆ ಸೋಮನಾಥ, ಚಾಮರಸ, ಲಕ್ಕಣ್ಣ ದಂಡೇಶ

(C) ಚಾಮರಸ, ಲಕ್ಕಣ್ಣ ದಂಡೇಶ, ಭೀಮಕವಿ, ಪಾಲ್ಕುರಿಕೆ ಸೋಮನಾಥ

(D) ಪಾಲ್ಕುರಿಕೆ ಸೋಮನಾಥ, ಭೀಮಕವಿ, ಲಕ್ಕಣ್ಣ ದಂಡೇಶ, ಚಾಮರಸ

**50.** (A) ವಾಸ್ತವತಾವಾದ, ರಮ್ಯವಾದ, ಸಂಕೇತವಾದ, ನಿರಚನವಾದ

(B) ರಮ್ಯವಾದ, ವಾಸ್ತವತಾವಾದ, ಸಂಕೇತವಾದ, ನಿರಚನವಾದ

(C) ಸಂಕೇತವಾದ, ರಮ್ಯವಾದ, ವಾಸ್ತವತಾವಾದ, ನಿರಚನವಾದ

(D) ಸಂಕೇತವಾದ, ನಿರಚನವಾದ, ರಮ್ಯವಾದ, ವಾಸ್ತವತಾವಾದ



Latest Sarkari Jobs, Govt Exam Results, Vacancies and updates on one click
Know More

prepp

# Latest Sarkari jobs, Govt Exam alerts, Results and Vacancies

- Latest News and Notification
- Exam Paper Analysis
- Topic-wise weightage
- Previous Year Papers with Answer Key
- Preparation Strategy & Subject-wise Books

To know more **Click Here**

www.prepp.in